<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 06-08-2022.**</u>

**ಪಾಟೀ ಸವಾಲು - 7 ಮತ್ತು 8 ನೇ ಪ್ರತಿವಾದಿ ಪರ ವಕೀಲರಿಂದ**

8) ನನ್ನ ತಾತನ ಹೆಸರು ರಾಮದಾಸಪ್ಪ. ರಾಮದಾಸಪ್ಪನಿಗೆ ನಾಲ್ಕು ಜನ ಮಕ್ಕಳು. 2 ಮತ್ತು 3 ನೇ ಪ್ರತಿವಾದಿಗಳು ನನ್ನ ದೊಡ್ಡಪ್ಪನ ಮಕ್ಕಳು ಎಂದರೆ ಸರಿ. ನಾರಾಯಣಸ್ವಾಮಿಯು ವೆಂಕಟರಮಣಪ್ಪನ ಮಗನೆಂದರೆ ಸರಿ. ನಾರಾಯಣಸ್ವಾಮಿಗೆ ನಾಲ್ಕು ಜನ ಮಕ್ಕಳು ಎಂದರೆ ಸರಿ. ನಾನು ಹೇಳುತ್ತೇನೆ, ನಾರಾಯಣಸ್ವಾಮಿಗೆ ಎರಡು ಮದುವೆಗಳಾಗಿದ್ದು, ಐದು ಜನ ಮಕ್ಕಳಿದ್ದಾರೆ. ನಾರಾಯಣಸ್ವಾಮಿಯ ಮೊದಲ ಹೆಂಡತಿಗೆ ಮುನಿಕೃಷ್ಣ, ಭಾಗ್ಯರಾಜ್, ಲೋಕೇಶ್, ಸಂತೋಷ್ ಇವರು ಮಕ್ಕಳು. ಎರಡನೇ ಹೆಂಡತಿಗೆ ಒಬ್ಬ 11 ವರ್ಷದ ಮಗನಿದ್ದು ನನಗೆ ಹೆಸರು ಗೊತ್ತಿಲ್ಲ. ನಾರಾಯಣಸ್ವಾಮಿಯ ಮೊದಲ ಹೆಂಡತಿಯ ಮಕ್ಕಳು ಎಂದು ಹೇಳಿದ ನಾಲ್ಕು ಜನಕ್ಕೆ ರಾಮದಾಸಪ್ಪ ತಾತನಾಗಬೇಕು ಎಂದರೆ ಹೌದು, ತಾತ ಮತ್ತು ಮುತ್ತಾತನಾಗಬೇಕು. ಅವರು ಸಂಬಂಧಿಕರು ಎಂದು ಗೊತ್ತಿದ್ದರೂ ಕೂಡ ವಾದ ಪತ್ರದ 5 ನೇ ಪ್ಯಾರಾದಲ್ಲಿ ನಾನು ಪ್ರತಿವಾದಿಗಳು ಅಪರಿಚಿತರು ಎಂದು ಯಾಕೆ ಬರೆಸಿದ್ದೇನೆ ಎಂದರೆ 1 ನೇ ಪ್ರತಿವಾದಿ ಜಯಶಂಕರ್ ನಮ್ಮವರಲ್ಲವಾದ್ದರಿಂದ ಆ ರೀತಿ ಬರೆಸಿದ್ದೇನೆ. 1 ನೇ ಪ್ರತಿವಾದಿ ಯಾರು ಎಂದರೆ ಅವರು ಮುನೀಂದ್ರನ ಕಡೆಯಿಂದ ನಮ್ಮ ಪಕ್ಕದಲ್ಲೇ ಸೈಟ್ ಖರೀದಿ ಮಾಡಿದ ವ್ಯಕ್ತಿ. 1 ನೇ ಪ್ರತಿವಾದಿ ನನಗೆ ಉತ್ತರದ ಕಡೆಗೆ ಸೈಟ್ ಖರೀದಿಸಿದ್ದಾರೆ. ಅದರ ಹಳೇ ಸರ್ವೆ ನಂ.28, ಹೊಸ ಸರ್ವೆ ನಂ.28-22 ಇರುತ್ತದೆ. ಅದು ಎರಡೂಕಾಲು ಗುಂಟೆ ಇರುತ್ತದೆ. ಚೆಕ್ಕುಬಂದಿ ಪೂರ್ವಕ್ಕೆ 208-1, ಪಶ್ಚಿಮಕ್ಕೆ ಅದೇ ಸೈಟಿಗೆ 10 ಅಡಿ ದಾರಿ, ದಕ್ಷಿಣಕ್ಕೆ ಹಳೇ ಸರ್ವೆ ನಂ.28,

ಹೊಸ ಸರ್ವೆ ನಂ.28-6 ಮತ್ತು ಉತ್ತರಕ್ಕೆ ಮುನೀಂದ್ರನ ಉಳಿಕೆ ಜಮೀನು ಇರುತ್ತವೆ. 2 ರಿಂದ 6 ನೇ ಪ್ರತಿವಾದಿಗಳು ನನಗೆ ಸಂಬಂಧಿಕರು ಎಂದರೆ ಸರಿ. ನನಗೆ ಅವರ ಮತ್ತು ನನ್ನ ಸಂಬಂಧದ ಅರಿವಿದ್ದರೂ ವಾದ ಪತ್ರದಲ್ಲಿ ಸಂಬಂಧ ತಿಳಿಸದೇ ಮರೆಮಾಚಿದ್ದೇನೆ ಎಂದರೆ ವಾದ ಪತ್ರದಲ್ಲಿ 2 ರಿಂದ 6 ನೇ ಪ್ರತಿವಾದಿಗಳನ್ನು ನನ್ನ ದೊಡ್ಡಪ್ಪನ ಮಕ್ಕಳು ಮತ್ತು ಮೊಮ್ಮಕ್ಕಳು ಎಂದು ಹೇಳಿದ್ದೇನೆ. ನಾನು ಉದ್ದೇಶಪೂರಿತವಾಗಿ ಸಂಬಂಧ ಮಾರೆಮಾಚಿ ಪ್ರತಿವಾದಿಗಳು ಅಪರಿಚಿತರು ಎಂದು ಹೇಳಿದ್ದೇನೆ ಎಂದರೆ ಇಂಗ್ಲೀಷ್ನಲ್ಲಿ ವಾದಪತ್ರ ಟೈಪ್ ಮಾಡಿರುವ ಸಂಗತಿಗಳು ನನಗೆ ಗೊತ್ತಿಲ್ಲ. ಅದನ್ನು ಟೈಪ್ ಮಾಡಿಸಿದವರು ಯಾರು ಎಂದರೆ ನನ್ನ ವಕೀಲರು. ವಾದಪತ್ರವನ್ನು ತಯಾರಿಸಲು ಹೇಳಿದವರು ಯಾರು ಎಂದರೆ ನಾನೇ. ನನಗೆ ವಾದಪತ್ರದ ಬಗ್ಗೆ ಮತ್ತು ಪ್ರತಿವಾದಿಗಳ ನಡುವಿನ ಸಂಬಂಧದ ಬಗ್ಗೆ ಮಾಹಿತಿ ಇಲ್ಲ ಎಂದರೆ ಮಾಹಿತಿ ಇದೆ. 7 ಮತ್ತು 8 ನೇ ಪ್ರತಿವಾದಿಗಳನ್ನು ದಾವೆಗೆ ಏಕೆ ಸೇರಿಸಿದ್ದೇನೆ ಎಂದರೆ ನನ್ನ ಜಾಗವನ್ನು ಒತ್ತುವರಿ ಮಾಡಿದ್ದರಿಂದ ಸೇರಿಸಿದ್ದೇನೆ. ಅವರು ನನ್ನ ಜಮೀನಿಗೆ ಉತ್ತರದ ಕಡೆಯಿಂದ ಒತ್ತುವರಿ ಮಾಡಿದ್ದಾರೆ. ಮುನೀಂದ್ರ, ನಾಗರಾಜು, ವಿಜಯಲಕ್ಷ್ಮೀ ಮತ್ತು ರೇಣುಕಾ ಒಟ್ಟು 5 ಗುಂಟೆ ಒತ್ತುವರಿ ಮಾಡಿದ್ದಾರೆ. ಒತ್ತುವರಿ ಮಾಡಿದ ಬಗ್ಗೆ ಕೋರ್ಟಿಗೆ ತಹಶೀಲ್ದಾರರ ಆದೇಶವನ್ನು ಕೊಟ್ಟಿದ್ದೇನೆ. ನಾನು ಆ ರೀತಿಯ ಯಾವುದೇ ಆದೇಶವನ್ನು ಕೊಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ಯಾವುದೇ ಅತಿಕ್ರಮ ಪ್ರವೇಶ ಮತ್ತು ಒತ್ತುವರಿಯನ್ನು ಮಾಡದೇ ಇದ್ದರೂ ನಾನು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಯಾವ ಯಾವ ಪ್ರತಿವಾದಿಗಳು ನನ್ನ ಆಸ್ತಿಯ ಯಾವ ಯಾವ ದಿಕ್ಕುಗಳಲ್ಲಿ ಆಸ್ತಿ ಹೊಂದಿದ್ದಾರೆ

ಎಂದರೆ 1 ರಿಂದ 7 ನೇ ಪ್ರತಿವಾದಿಗಳು ಎಲ್ಲರೂ ನನ್ನ ಆಸ್ತಿಯ ಉತ್ತರ ದಿಕ್ಕಿನಲ್ಲೇ ಆಸ್ತಿ ಹೊಂದಿದ್ದಾರೆ. 2 ನೇ ಪ್ರತಿವಾದಿಯ ಆಸ್ತಿಯ ಚೆಕ್ಕುಬಂದಿ ಹೇಳಬಲ್ಲೆ. ಪೂರ್ವಕ್ಕೆ ಸರ್ವೆ ನಂ.208, ಪಶ್ಚಿಮಕ್ಕೆ ನಾಗರಾಜುರವರ ಜಮೀನು, ಉತ್ತರಕ್ಕೆ ಚಿಕ್ಕಬಳ್ಳಾಪುರ ರಸ್ತೆ ಮತ್ತು ದಕ್ಷಿಣಕ್ಕೆ 1 ನೇ ಪ್ರತಿವಾದಿಯ ಆಸ್ತಿ ಇರುತ್ತವೆ. 4 ನೇ ಪ್ರತಿವಾದಿಯ ಚೆಕ್ಕುಬಂದಿ ಪೂರ್ವಕ್ಕೆ 3 ನೇ ಪ್ರತಿವಾದಿಯ ಆಸ್ತಿ, ಪಶ್ಚಿಮಕ್ಕೆ ರಾಮಕೃಷ್ಣಪ್ಪನ ಆಸ್ತಿ, ಉತ್ತರಕ್ಕೆ 5 ನೇ ಪ್ರತಿವಾದಿಯ ಆಸ್ತಿ ಮತ್ತು ದಕ್ಷಿಣಕ್ಕೆ ನನ್ನ ಸರ್ವೆ ನಂ.28-6 ಇರುತ್ತವೆ. 5 ನೇ ಪ್ರತಿವಾದಿಯ ಚೆಕ್ಕುಬಂದಿ ಹೇಳಿ ಎಂದರೆ ಸಾಕ್ಷಿಯು ತಳಗಡೆಗೆ ಹೋಗುತ್ತಾ ಚೆಕ್ಕುಬಂದಿಗಳು ಗೊತ್ತಿಲ್ಲ ಸ್ವಾಮಿ ಎಂದು ಹೇಳಿದ್ದಾರೆ. 8 ನೇ ಪ್ರತಿವಾದಿಯ ಚೆಕ್ಕುಬಂದಿ ಪೂರ್ವಕ್ಕೆ ಅವರೇ ಬಿಟ್ಟಿರುವ 12 ಅಡಿ ದಾರಿ, ಪಶ್ಚಿಮಕ್ಕೆ ರಾಮಕೃಷ್ಣಪ್ಪನ ಆಸ್ತಿ, ಉತ್ತರಕ್ಕೆ 7 ನೇ ಪ್ರತಿವಾದಿಯ ಆಸ್ತಿ ಮತ್ತು ದಕ್ಷಿಣಕ್ಕೆ ನಮ್ಮ ಜಮೀನು ಇರುತ್ತವೆ. 7 ನೇ ಪ್ರತಿವಾದಿಯ ಚೆಕ್ಕುಬಂದಿ ಹೇಳಿ ಎಂದರೆ ಮತ್ತೆ ಸಾಕ್ಷಿಯು ತಳಗಡೆಗೆ ಹೋಗುತ್ತಾ ಚೆಕ್ಕುಬಂದಿಗಳು ಗೊತ್ತಿಲ್ಲ ಸ್ವಾಮಿ ಎಂದು ಹೇಳಿದ್ದಾರೆ. ನನ್ನ ಆಸ್ತಿಯ ಉತ್ತರಕ್ಕೆ ಚೆಕ್ಕುಬಂದಿ ಏನು ಎಂದರೆ 1 ನೇ ಪ್ರತಿವಾದಿಯ ಸರ್ವೆ ನಂ.28-22, 3 ನೇ ಪ್ರತಿವಾದಿಯ ಸರ್ವೆ ನಂ.28-1, 8 ನೇ ಪ್ರತಿವಾದಿಯ ಸರ್ವೆ ನಂ.18 ಅಥವಾ 19 ಇರಬಹುದು. ಸಾಕ್ಷಿಯು ಮತ್ತೆ ಉತ್ತರಕ್ಕೆ ರೇಣುಕಾ ರವರ ಹಳೇ ಸರ್ವೆ ನಂ.28-1, ಹೊಸ ಸರ್ವೆ ನಂ.28-19 ಇರುತ್ತದೆ ಎಂದು ಹೇಳುತ್ತಾರೆ. ವಾದ ಪತ್ರದ ಚೆಕ್ಕುಬಂದಿಯಲ್ಲಿ ನನ್ನ ಆಸ್ತಿಯ ಉತ್ತರಕ್ಕೆ ಮೊದಲು ಯಾರ ಆಸ್ತಿ ನಂತರ ಯಾರ ಆಸ್ತಿ ಮತ್ತು ತದನಂತರ ಯಾರ ಆಸ್ತಿ ಬರುತ್ತವೆ ಎಂದು ಬರೆದಿಲ್ಲ ಎಂದರೆ ಸರಿ. ನಾನು ಸ್ಥಳದಲ್ಲಿ ಇರುವ ವಾಸ್ತವ

ಸಂಗತಿಗಳ ಅರಿವು ಇಲ್ಲದೇ ಸ್ವಾಧೀನ ಹೊಂದಿಲ್ಲದೇ ಇರುವ ಕಾರಣ ಸರಿಯಾದ ಚೆಕ್ಕುಬಂದಿ ಬರೆಯಿಸಿಲ್ಲ ಎಂದರೆ ಸ್ವಾಧೀನದಲ್ಲಿ ನಾನೇ ಇದ್ದೇನೆ. ಪುನಃ ಸಾಕ್ಷಿಗೆ ವಾದಪತ್ರದ ಚೆಕ್ಕುಬಂದಿಯಲ್ಲಿ ಉತ್ತರ ದಿಕ್ಕಿನಲ್ಲಿ ನಿರ್ದಿಷ್ಟವಾಗಿ ಯಾರ ಆಸ್ತಿಗಳಿವೆ ಎಂದು ಬರೆದಿಲ್ಲ ಎಂದು ಸೂಚಿಸಿದರೆ ಸಾಕ್ಷಿಯು ಹೌದು ಎಂದಿದ್ದಾರೆ. ಪ್ರತಿವಾದಿಗಳು ಯಾರು ಯಾರು ಯಾವ ಯಾವ ಸ್ಥಳಗಳಲ್ಲಿ ಸ್ವಾಧೀನ ಹೊಂದಿದ್ದಾರೆಂದು ನನಗೆ ಗೊತ್ತಿಲ್ಲದ ಕಾರಣದಿಂದಲೇ ವಾದಪತ್ರದಲ್ಲಿ ಬರೆಯಿಸಿಲ್ಲ ಎಂದರೆ ನನಗೆ ಅವರು ಸ್ವಾಧೀನ ಇರುವ ಸ್ಥಳಗಳು ಗೊತ್ತಿವೆ.

9) ನಾನು ಕೋರ್ಟಿನಲ್ಲಿ ಒತ್ತುವರಿಯಾಗಿರುವ ನನ್ನ ಐದು ಗುಂಟೆಯನ್ನು ಬಿಡಿಸಿಕೊಡಬೇಕೆಂಬ ಪರಿಹಾರ ಕೋರಿದ್ದೇನೆ. 1 ರಿಂದ 3 ಮತ್ತು 8 ನೇ ಪ್ರತಿವಾದಿ ಸದರಿ 5 ಗುಂಟೆಯನ್ನು ಒತ್ತುವರಿ ಮಾಡಿಕೊಂಡಿದ್ದು, ಅವರಲ್ಲಿ ಒಬ್ಬೊಬ್ಬರು ತಲಾ ಎಷ್ಟು ಗುಂಟೆ ಒತ್ತುವರಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. 7 ನೇ ಪತಿವಾದಿ ವಿಜಯಲಕ್ಷ್ಮೀ ಒತ್ತುವರಿ ಮಾಡಿಲ್ಲ ಎಂದರೆ ಅವರ ಆಸ್ತಿ ನನ್ನ ಚೆಕ್ಕುಬಂದಿ ಒಳಗಡೆ ಬರುವುದಿಲ್ಲ. 8 ನೇ ಪ್ರತಿವಾದಿ ರೇಣುಕಾ ನನ್ನ ಪ್ರಕಾರ ಎರಡು ಗುಂಟೆ ಒತ್ತುವರಿ ಮಾಡಿರಬಹುದು. ದಾವಾ ಸ್ವತ್ತಿನ ಮೂಲ ಸರ್ವೆ ನಂಬರ್ 28 ಇರುತ್ತದೆ. ಅದರ ವಿಸ್ತೀರ್ಣ 3 ಗುಂಟೆ ಖರಾಬನ್ನು ಸೇರಿಸಿ 1 ಎಕರೆ 36 ಗುಂಟೆ ಇರುತ್ತದೆ. ದಾವಾ ಸ್ವತ್ತು ಮೂಲತಃ ಚಂದ್ರಶೇಖರಯ್ಯನವರಿಗೆ ಸೇರಿತ್ತು ಎಂದು ಹೇಳುತ್ತಾರೆ, ನಮಗೆ ಸರಿಯಾಗಿ ಗೊತ್ತಿಲ್ಲ. ಸದರಿ ಚಂದ್ರಶೇಖರಯ್ಯನಿಂದ ದಾವಾ ಸ್ವತ್ತು ನನ್ನ ತಾತ ರಾಮದಾಸಪ್ಪನಿಗೆ ಸುಮಾರು 1970 ರ ಕ್ರಯಪತ್ರದ ಮೂಲಕ ಬಂದಿತ್ತು. ನಂತರ

ರಾಮದಾಸಪ್ಪನ ಮಕ್ಕಳಿಗೆ ವಿಭಾಗದ ಮೂಲಕ ಬಂದಿತು. ವಿಭಾಗದ ಮೂಲಕ ನನ್ನ ದೊಡ್ಡಪ್ಪ ವೆಂಕಟರಮಣಪ್ಪ, ನನ್ನ ತಂದೆ ಕೃಷ್ಣಪ್ಪ ಮತ್ತು ನನ್ನ ಚಿಕ್ಕಪ್ಪ ಅಯ್ಯಣ್ಣನಿಗೆ ಬಂದಿತ್ತು. ವಿಭಾಗವು 1977 ರಲ್ಲಿ ಆಗಿತ್ತು. ಸದರಿ ವಿಭಾಗದಲ್ಲಿ ನನ್ನ ದೊಡ್ಡಪ್ಪನಿಗೆ 1 ಎಕರೆ ಎಂಟೂವರೆ ಗುಂಟೆ, ನನ್ನ ತಂದೆಗೆ ಹನ್ನೆರಡೂಕಾಲು ಗುಂಟೆ ಮತ್ತು ನನ್ನ ಚಿಕ್ಕಪ್ಪನಿಗೆ ಹನ್ನೆರಡೂಕಾಲು ಗುಂಟೆ ಬಂದಿತ್ತು. ವೆಂಕಟರಮಣಪ್ಪನಿಗೆ ಬಂದ 1 ಎಕರೆ ಎಂಟೂವರೆ ಗುಂಟೆಯ ಚೆಕ್ಕುಬಂದಿ ಹೇಳಿ ಎಂದರೆ ಅವರಿಗೆ ಎರಡು ಕಡೆ ಆಸ್ತಿ ಕೊಟ್ಟಿದ್ದರು. ಒಂದು ಕಡೆ ಇಪ್ಪತ್ನಾಲ್ಕೂವರೆ ಗುಂಟೆ, ಇನ್ನೊಂದು ಕಡೆ 24 ಗುಂಟೆ ಕೊಟ್ಟಿದ್ದರು. ಆ ಎರಡೂ ಕಡೆ ಹಿಸ್ಸೆಕೊಟ್ಟ ವಿಸ್ತೀರ್ಣಗಳ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ನನ್ನ ತಂದೆಗೆ ಕೊಟ್ಟ ಹನ್ನೆರಡೂ ಕಾಲು ಗುಂಟೆಯ ಚೆಕ್ಕುಬಂದಿ ಪೂರ್ವಕ್ಕೆ ಕೆ. ಮುನಿಶಾಮಪ್ಪನ ಜಮೀನು, ಪಶ್ಚಿಮಕ್ಕೆ ನಾಗಪ್ಪ ರೆಡ್ಡಿಯ ಜಮೀನು, ಉತ್ತರಕ್ಕೆ ಅಯ್ಯಣ್ಣನ ಜಮೀನು ಮತ್ತು ದಕ್ಷಿಣಕ್ಕೆ ವೆಂಕಟರಮಣಪ್ಪನ ಜಮೀನು. ಇದು ಹಳೆಯ ಚೆಕ್ಕುಬಂದಿಯಾಗಿದ್ದು ಈಗ ಸೈಟುಗಳಾಗಿರುವುದರಿಂದ ಹೊಸ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಸೈಟುಗಳು ಎಂದರೆ ಮನೆ ಕಟ್ಟುವ ಸೈಟುಗಳೇ ಎಂದರೆ ಹೌದು. ಅಂದಾಜು ಎಷ್ಟು ಸೈಟುಗಳಾಗಿವೆ ಎಂದರೆ ನನಗೆ ಗೊತ್ತಿಲ್ಲ. ಕೆಲವೊಂದರಲ್ಲಿ ಮನೆ ಕಟ್ಟಿದ್ದಾರೆ, ಕೆಲವೊಂದು ಖಾಲಿ ಇವೆ. ಈಗ ನಮ್ಮ ಚಿಕ್ಕಪ್ಪನ ಕಡೆಯಿಂದ ಕ್ರಯ ಮಾಡಿದ್ದನ್ನೂ ಸೇರಿಸಿ ಒಟ್ಟು ಇಪ್ಪತ್ನಾಲ್ಕೂವರೆ ಗುಂಟೆಯಲ್ಲಿ ಒತ್ತುವರಿಯಾದ 5 ಗುಂಟೆ ಬಿಟ್ಟು ನಾವು ಹತ್ತೊಂಭತ್ತೂವರೆ ಗುಂಟೆಯಲ್ಲಿ ಸ್ವಾಧೀನ ಹೊಂದಿದ್ದೇವೆ. ಆ ರೀತಿ ಸ್ವಾಧೀನ ಇರುವ ಬಗ್ಗೆ ತಹಶೀಲ್ದಾರರ ಆದೇಶ ಕೊಟ್ಟಿದ್ದೇನೆ, ಸ್ಕೆಚ್ ಕೊಟ್ಟಿಲ್ಲ. ಸ್ವಾಧೀನದಲ್ಲಿ ಇಲ್ಲವಾದ್ದರಿಂದ ನಾನು ಹೇಳುವ ಯಾವುದೇ ಆದೇಶವನ್ನು ಮತ್ತು

ಸ್ಕೆಚ್ ಅನ್ನು ಕೊಟ್ಟಿಲ್ಲ ಎಂದರೆ ಆದೇಶವನ್ನು ಕೊಟ್ಟಿದ್ದೇನೆ. ತಹಶೀಲ್ದಾರರ ಮುಂದೆ ನಡೆದ ಕೇಸಿನ ನಂಬರ್ ನನಗೆ ಗೊತ್ತಿಲ್ಲ. ನನ್ನ ತಂದೆ ಆರ್. ಕೃಷ್ಣಪ್ಪ ಖಾತೆ ಮಾಡದಂತೆ ದಿ.21-09-2010 ರಂದು ತಕರಾರು ಕೊಟ್ಟಿದ್ದು, ಈಗ ತೋರಿಸಿದ ತಕರಾರಿನ ಪ್ರತಿ ಅದೇ ಎಂದರೆ ಸರಿ ಎಂದಿದ್ದರಿಂದ **ನಿ.ಡಿ.1** ಎಂದು ಗುರುತಿಸಿತು. ಸದರಿ ತಕರಾರಿನ ಅನ್ವಯ ತಹಶೀಲ್ದಾರರು ಸ್ವತಃ ಎರಡು ಆರ್.ಆರ್.ಟಿ. ಪ್ರಕರಣಗಳನ್ನು ದಾಖಲಿಸಿಕೊಂಡಿದ್ದು, ಈಗ ತೋರಿಸಿದ ಸದರಿ ಪ್ರಕರಣಗಳ ಆದೇಶಗಳು ಇವೇ ಇರುತ್ತವೆ ಎಂದರೆ ಸರಿ ಎಂದಿದ್ದರಿಂದ **ನಿ.ಡಿ.2 ಮತ್ತು ನಿ.ಡಿ.3** ಎಂದು ಗುರುತಿಸಿತು. ತಹಶೀಲ್ದಾರರು ಮಾಡಿದ ಆದೇಶದಂತೆ 7 ಮತ್ತು 8 ನೇ ಪ್ರತಿವಾದಿಗೆ ಖಾತೆ ನಮೂದಾಗಿದೆ ಎಂದರೆ 8 ನೇ ಪ್ರತಿವಾದಿಯ ಆದೇಶ ವಜಾ ಆಗಿದೆ. ಸಾಕ್ಷಿಗೆ ನಿ.ಡಿ.2 ಮತ್ತು ನಿ.ಡಿ.3 ನ್ನು ಓದುವಂತೆ ಕೊಟ್ಟು ಸಾಕ್ಷಿ ಓದಿದ ನಂತರ 7 ಮತ್ತು 8 ನೇ ಪ್ರತಿವಾದಿಗೆ ಖಾತೆ ಮಾಡುವಂತೆ ಆದೇಶವಾಗಿರುವುದು ನಿಜವೆಂದು ಒಪ್ಪಿದ್ದಾರೆ. ಅದರಂತೆ ಸದರಿ ಪ್ರತಿವಾದಿಗಳಿಗೆ ಕಂದಾಯ ದಾಖಲೆಗಳು ನಮೂದಾಗಿವೆ ಎಂದರೆ ಆಗಿರಬಹುದು. ಅದರಂತೆ ಸ್ವಾಧೀನ ಮತ್ತು ಅನುಭವ ಹೊಂದಿ ಅವರೇ ಸ್ವಾಧೀನ ಹೊಂದಿದ್ದಾರೆ ಎಂದರೆ ಉತ್ತರಿಸಿಲ್ಲ.

**(**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಿತು**).**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**